ತಮ್ಮದಾಗಿಸಿಕೊಳ್ಳುತ್ತ ಮಾಂಸಾಹಾರದಿಂದ ಸಸ್ಯಾಹಾರದತ್ತ ವಾಲಿದರು. ಆದರೆ ಬೌದ್ಧರು ಅಹಿಂಸೆಯನ್ನು ಪ್ರತಿಪಾದಿಸಿದರೂ ಮಾಂಸಾಹಾರ ವರ್ಜ್ಯವಿರಲಿಲ್ಲ. ಕಾರಣ ಆಹಾರಕ್ಕಾಗಿಯೇ ಪ್ರಾಣಿಗಳನ್ನು ಕೊಲ್ಲುವುದು ವರ್ಜ್ಯವಾಗಿದ್ದರೂ, ಅಸುನೀಗಿದ ಪ್ರಾಣಿಗಳ ಮಾಂಸ ತಿನ್ನುವುದು ವರ್ಜ್ಯವಾಗಿರಲಿಲ್ಲ. ಹೀಗೆ ಬ್ರಾಹ್ಮಣರು ಮಾಂಸ ಸೇವನೆಯನ್ನು ಪೂರ್ಣವಾಗಿ ಬಿಟ್ಟುಕೊಟ್ಟರೆ, ಬ್ರಾಹ್ಮಣರನ್ನು ಅನೇಕ ರೀತಿಯಲ್ಲಿ ಅನುಸರಿಸಲು ಪ್ರಯತ್ನಿಸಿದ ಇತರ ಹಿಂದೂಗಳು ದನದ ಮಾಂಸ ತಿನ್ನುವುದನ್ನು ಬಿಟ್ಟುಕೊಟ್ಟರು. ಹೀಗೆ ಬೌದ್ಧಧರ್ಮಕ್ಕೆ ಸವಾಲಾಗಿ ಹಿಂದೂಗಳು ಒಂದು 'ಶುದ್ಧಿ'ಯ ಸವಾಲನ್ನು ಒಡ್ಡಿದರು. ಬೌದ್ಧಧರ್ಮೀಯರು ದನದ ಮಾಂಸವನ್ನೊಳಗೊಂಡು ಎಲ್ಲ ಮಾಂಸಗಳನ್ನೂ ಸೇವಿಸುತ್ತಿದ್ದುದರಿಂದ ಅವರು ಈ ವ್ಯವಸ್ಥೆಯ ಹೊರಗೇ ಉಳಿದರು.

ಈ ವಾದಕ್ಕೆ ಅಂಬೇಡ್ಕರ್ 'ಒಡೆದ ಮನುಷ್ಯ'ರ ವಾದವನ್ನೂ ಸೇರಿಸುತ್ತಾರೆ. ನಾಗರಿಕತೆ ಬೆಳೆದಂತೆ ಜನರು ಒಂದು ಜಾಗದಲ್ಲಿ ನೆಲೆಯೂರುತ್ತಿದ್ದರೆ ಕೆಲವು ಬುಡಕಟ್ಟುಗಳು ಅಲೆಮಾರಿಯಾಗಿದ್ದವು. ಅಲೆಮಾರಿಗಳಾಗಿದ್ದರಿಂದ ಅವರು ಒಂದು ನಿರ್ದಿಷ್ಟ ಸಮುದಾಯವಾಗಲು ಸಾಧ್ಯವಾಗಲಿಲ್ಲ. ಹೀಗಾಗಿ, ಅವರನ್ನು 'ಒಡೆದ ಮನುಷ್ಯ'ರೆಂದು ಅಂಬೇಡ್ಕರ್ ಕರೆಯುತ್ತಾರೆ. ನೆಲೆಯೂರಿದ ಬುಡಕಟ್ಟುಗಳು ಕೃಷಿಯತ್ತ ವಾಲಿ ಸಸ್ಯಾಹಾರವನ್ನು ತಮ್ಮದಾಗಿಸಿಕೊಳ್ಳಲು ಸಾಧ್ಯವಾದರೆ, ಅಲೆಮಾರಿ ಬುಡಕಟ್ಟುಗಳು ಗ್ರಾಮಗಳನ್ನು ಪ್ರವೇಶಿಸಿ ನೆಲೆಸುವ ಅವಕಾಶಗಳಿಲ್ಲದಂತಾಯಿತು. ಹೀಗಾಗಿ ಆ ಬುಡಕಟ್ಟುಗಳು ಗ್ರಾಮದಿಂದ ಹೊರಗೇ ಉಳಿದು ತಮ್ಮದೇ ಸಂಸ್ಕೃತಿಯನ್ನು ಬೆಳೆಸಿ ಪಾಲಿಸಿದರು. ಊರ ಹೊರಗಿದ್ದದ್ದರಿಂದ ಹಾಗೂ ಆಹಾರ ಸೇವನೆಯಲ್ಲಿ ತೀವ್ರ ಭಿನ್ನತೆಯಿಂದಾಗಿ ಅವರು ಅಲ್ಲೇ ನೆಲೆಸಿದರು. ಒಡೆದ ಮನುಷ್ಯರು ಗೋಹತ್ಯೆ ಮಾಡುತ್ತಿರಲಿಲ್ಲವಾದರೂ, ಗೋಮಾಂಸ ಸೇವಿಸುತ್ತಿದ್ದರಾದ್ದರಿಂದ, ಮೃತ ಪ್ರಾಣಿಗಳ ಕಳೇಬರವನ್ನು ತೆಗೆದುಕೊಂಡು ಹೋಗಿ, ಅದರ ಮಾಂಸ ಸೇವಿಸುವುದು ಮುಂದುವರೆದಿತ್ತು.

ಹೀಗೆ ಅಂಬೇಡ್ಕರ್ ತಮ್ಮ ಸಣ್ಣ ಪುಸ್ತಕದಲ್ಲಿ ಶತಮಾನಗಳ ಇತಿಹಾಸದ ಹಾಗೂ ಕ್ರಮೇಣ ಆಗಿರುವ ಬದಲಾವಣೆಗಳನ್ನು ಗ್ರಹಿಸಿ ಮುಂದಿಡಲು ಪ್ರಯತ್ನಿಸುತ್ತಾರೆ. ಈ ರೀತಿಯ ಬರವಣಿಗೆಯಲ್ಲಿರುವ ಸಮಸ್ಯೆಯೆಂದರೆ, ಅನೇಕ ಆಕರ ಗ್ರಂಥಗಳಿಂದ ಮತ್ತು ಮೂಲಗಳಿಂದ ಪಡೆದಿರುವ ಮಾಹಿತಿಯನ್ನು ತಮ್ಮ ವಾದಕ್ಕೆ ಒಡ್ಡಿ, ಒಂದು ಬಲವಾದ ಸಿದ್ಧಾಂತವನ್ನು ಸ್ಥಾಪಿಸಬೇಕು. ಆ ಸಿದ್ಧಾಂತಕ್ಕೆ ಇರುವ ವ್ಯಾಪಕತೆಯನ್ನು ಕಂಡಾಗ ಅವರ ವಾದಸರಣಿ ಸ್ವಲ್ಪ ವಿಲಕ್ಷಣವೆನ್ನಿಸಬಹುದು, ಮನದಟ್ಟಾಗದಿರಬಹುದು. ಹೀಗಾಗಿಯೇ ಆನಂದ್ ಮತ್ತು ಅಲೆಕ್ಸ್ ಜಾರ್ಜ್ ಈಚೆಗೆ ಸಂಪಾದಿಸಿರುವ 'ಬೀಫ್ ಬ್ರಾಹ್ಮಿನ್ಸ್ ಅಂಡ್ ಬ್ರೋಕನ್ ಮೆನ್' ಎನ್ನುವ ಪುಸ್ತಕ ಮುಖ್ಯವಾಗುತ್ತದೆ. ಅಂಬೇಡ್ಕರ್ ಪುಸ್ತಕದ ಮುಖ್ಯಭಾಗಗಳನ್ನು ಅವರ ವಾದಗಳ ಹಿನ್ನೆಲೆ, ಆಕರ ಗ್ರಂಥಗಳು ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಈ ಆವೃತ್ತಿ ಪ್ರಕಟವಾಗಿದೆ. ಅಂಬೇಡ್ಕರ್ ಪುಸ್ತಕದಿಂದ 30,000 ಪದಗಳ ಭಾಗವನ್ನು ಆಯ್ದಿದ್ದರೆ, ಅದರ ವಿವರಣೆಯ ಟಿಪ್ಪಣಿಗಳು 50,000 ಪದಗಳಷ್ಟಿವೆ. ಅಂಬೇಡ್ಕರ್ ಮಂಡಿಸುತ್ತಿದ್ದ ವಾದಗಳಿಗೆ ಗಟ್ಟಿಯಾದ ಸಂಶೋಧನೆ ಮತ್ತು ಚಾರಿತ್ರಿಕ ಮಹತ್ವದ ಮೂಲಗಳಿವೆ ಎನ್ನುವುದು ಇನ್ನೂ ಗಟ್ಟಿಯಾಗಿ ನಿರೂಪಿತವಾಗುತ್ತದೆ. ಇದು ಅಂಬೇಡ್ಕರ್ ವಾದದ ಮಹತ್ವವನ್ನು ಹೆಚ್ಚಿಸಿ, ಅದಕ್ಕೊಂದು ಸಂದರ್ಭವನ್ನು ಒದಗಿಸಿಕೊಡುತ್ತದೆ. ಹಿಂದೂಧರ್ಮದ ಬಗ್ಗೆ ಇದ್ದ ಅಸಹನೆ, ಬೌದ್ಧಧರ್ಮದ ಬಗ್ಗೆ ಅಂಬೇಡ್ಕರ್‌ಗೆ ಇದ್ದ ಒಲವಿನ ಮೂಲವೆಲ್ಲಿರಬಹುದು ಎನ್ನುವುದೂ ಇದರಿಂದ ನಮಗೆ ತಿಳಿಯುತ್ತದೆ. ದನದ ಮಾಂಸ, ಸಸ್ಯಾಹಾರದ ಬಗೆಗಿನ ಮಾತುಗಳು ಹೆಚ್ಚೆಚ್ಚು ಕೇಳಿಬರುತ್ತಿರುವ ಕಾಲಕ್ಕೆ ಅಂಬೇಡ್ಕರ್ ಅಧ್ಯಯನ ಮುಖ್ಯವಾಗುತ್ತದಲ್ಲದೇ, ನಮ್ಮದೇ ಚರಿತ್ರೆ ಮತ್ತು ರಿವಾಜುಗಳ ಹಿನ್ನೆಲೆಯನ್ನು ಅರಿತುಕೊಳ್ಳಲೂ ಅನುಕೂಲವಾಗುತ್ತದೆ. ಧರ್ಮದ ಔನ್ನತ್ಯವನ್ನು ಸ್ಥಾಪಿಸುವಲ್ಲಿ ಬದಲಾಗುವ ಸಾಮಾಜಿಕ ರೀತಿರಿವಾಜುಗಳಿಗೆ ಧರ್ಮ, ದೇವರುಗಳ ಲೇಪನವಾಗುವ ಪ್ರಕ್ರಿಯೆಯನ್ನು ಅಂಬೇಡ್ಕರ್ ವಿವರಿಸಿದ್ದಾರೆ.